<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 15317-2016

ಸಿಡಬ್ಲೂ -18 ಪಿಡಬ್ಲೂ-14

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋವರ್ಧನ ಸ್ವಾಮಿ |
| ತಂದೆಯ ಹೆಸರು | : | ಶಿವನಂಜಪ್ಪ |
| ವಯಸ್ಸು | : | 54 ವರ್ಷ |
| ಕೆಲಸ | : | ಬೇಕರಿ ಕೆಲಸ |
| ವಾಸ | : | ಚಿಕ್ಕಸಂದ್ರ, ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 31-01-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>

<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ಸಪ್ತಗಿರಿ ಕಾಲೇಜಿನ ಬಳಿ ಇರುವ ಕಾಂತಿ ಸ್ವೀಟ್ಸನಲ್ಲಿ ನಾನು ಮೇ 2015 ರಿಂದ ಇಲ್ಲಿಯವರೆಗೆ ನಾನು ಕೆಲಸ ಮಾಡುತ್ತಿದ್ದೇನೆ.

ದಿ. 31-01-2016 ರಂದು ಸಂಜೆ 07.30 ಗಂಟೆಯ ಸಮಯದಲ್ಲಿ ಮುಖ್ಯ ರಸ್ತೆಯಲ್ಲಿ ಗಲಾಟೆ ನಡೆಯುತ್ತಿತ್ತು, ಆ ಕಡೆಗೆ ಸಾರ್ವಜನಿಕರು ಓಡಿ ಹೋಗುತ್ತಿದ್ದರು. ಆಗ ಜನರನ್ನು ವಿಚರಿಸಲಾಗಿ ಅಪಘಾತವಾಗಿದೆ ಆ ಕಾರಣ ಹೋಗುತ್ತಿದ್ದೇವೆ ಎಂದು ಹೇಳಿದರು. ಅರ್ಧ ಗಂಟೆಯ ನಂತರ ಕೆಲವು ಜನರು ವಾಪಸ್ಸು ಬರುತ್ತಿದ್ದರು ಅವರನ್ನು ವಿಚಾರಿಸಲಾಗಿ ಅಪಘಾತದಿಂದ ಒಬ್ಬ ವ್ಯಕ್ತಿಯು ಮೃತಪಟ್ಟಿದ್ದು ಆದ ಕಾರಣ ಗಲಾಟೆ ನಡೆಯುತ್ತಿದೆ ಎಂದು ಹೇಳಿದ್ದರು.

ದಿ. 05-02-2016 ರಂದು ಪೊಲೀಸರು ನಮ್ಮ ಬೇಕರಿಗೆ ಬಂದು ಸಿಸಿಟಿವಿ ಫುಟಏಜ್ ನ್ನು ಕೇಳಿದ್ದು ಪೆನ್ ಡ್ರೈವ್ ಗೆ ಹಾಕಿ ಕೊಟ್ಟಿರುತ್ತೇನೆ. ಪೆನ್ ಡ್ರೈವ್ ನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ನಾನು ಹೇಳಿದ ಹಾಗೇ ಯಾವುದೇ ಪೆನ್ ಡ್ರೈವ್ ನಲ್ಲಿ ಸಿಸಿಟಿವಿ ಫುಟಏಜ್ ನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ

<u>ಮರುವಿಚಾರಣೆಃ ಇಲ್ಲ</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ